## ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1111**
ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ ಗೌಡ
(ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 25.07.2024

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರದ ಸಾಧನೆ ಮತ್ತು ಯೋಜನೆಗಳ ಕುರಿತಾದ ಮಾಹಿತಿಯನ್ನು ಪ್ರಚಾರ ಮಾಡಲು 2023-24ರಿಂದ ಇಲ್ಲಿಯವರೆಗೂ ಮಾಡಿದ ವೆಚ್ಚವೆಷ್ಟು; (ಯೋಜನೆವಾರು ಮಾಹಿತಿ ನೀಡುವುದು) | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ರಾಜ್ಯ ಸರ್ಕಾರದ ಸಾಧನೆ ಮತ್ತು ಯೋಜನೆಗಳ ಕುರಿತಾದ ಮಾಹಿತಿಯನ್ನು ಪ್ರಚಾರ ಮಾಡಲು 2023-24 ರಿಂದ ಇಲ್ಲಿಯವರೆಗೂ ಮಾಡಿದ ವೆಚ್ಚ ಒಟ್ಟು ರೂ.**1,88,22,08,353/-** ಯೋಜನಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| (ಆ) | 2023-24ನೇ ಸಾಲಿನಲ್ಲಿ ಬಸ್ ಬ್ರ್ಯಾಂಡಿಗ್ ಮೂಲಕ ಯೋಜನೆಗಳ ಪ್ರಚಾರ ಮಾಡಲು ಮೀಸಲಿಟ್ಟ ಅನುದಾನವೆಷ್ಟು ಮತ್ತು ವೆಚ್ಚ ಮಾಡಿದ ಅನುದಾನವೆಷ್ಟು; | 2023-24ನೇ ಸಾಲಿನಲ್ಲಿ ಬಸ್ ಬ್ರ್ಯಾಂಡಿಂಗ್ ಮೂಲಕ ಸರ್ಕಾರದ ಯೋಜನೆ ಮತ್ತು ವಿವಿಧ ಕಾರ್ಯಕ್ರಮಗಳನ್ನು ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ) ಮಾದರಿಯಲ್ಲಿ ಜನರಿಗೆ ಮಾಹಿತಿ ನೀಡಲು ನಿಗದಿಪಡಿಸಿಕೊಂಡಿದ್ದ ಅನುದಾನದಲ್ಲಿಯೇ ಬಸ್ ಬ್ರ್ಯಾಂಡಿಂಗ್ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ.<br><br>ಬಸ್ ಬ್ರ್ಯಾಂಡಿಂಗ್ ಮೂಲಕ ಐ.ಇ.ಸಿ. ಚಟುವಟಿಕೆಗಳನ್ನು ಕೈಗೊಳ್ಳಲು **ರೂ.32,56,87,758/-** ಗಳು ವೆಚ್ಚವಾಗಿರುತ್ತದೆ. |
| (ಇ) | ಯಾವ ಯಾವ ಏಜೆನ್ಸಿಗಳಿಗೆ ಬಸ್ ನಿಲ್ದಾಣಗಳಲ್ಲಿ ಪ್ರಚಾರ ಮಾಡಲು ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ಏಜೆನ್ಸಿವಾರು ವಿವರ ನೀಡುವುದು) | 2023-24 ನೇ ಸಾಲಿನಲ್ಲಿ ಒದಗಿಸಿದ ಅನುದಾನದಲ್ಲಿ ಮೆ: ರಿಪ್ಪಲ್ ಮೀಡಿಯಾ ಸಂಸ್ಥೆ ಇವರಿಗೆ ಬಸ್ ನಿಲ್ದಾಣಗಳ ಪ್ರಚಾರ ಕಾರ್ಯಕ್ಕೆ **ರೂ.11,58,288/-**ಗಳು ವೆಚ್ಚವಾಗಿರುತ್ತವೆ. |
| (ಈ) | ಸದರಿ ಏಜೆನ್ಸಿಗಳಿಗೆ ಕಾರ್ಯಾದೇಶ ನೀಡಲು ಮತ್ತು ಅನುದಾನ ಬಿಡುಗಡೆ ಮಾಡಲು ಕೆ.ಟಿ.ಪಿ.ಪಿ ನಿಯಮ ಪಾಲಿಸಲಾಗಿತ್ತೇ? (ಪ್ರಕ್ರಿಯೆಯ ಸಂಪೂರ್ಣ ದಾಖಲೆಗಳನ್ನು ನೀಡುವುದು) | ಸರ್ಕಾರದ ಐ.ಇ.ಸಿ. ಚಟುವಟಿಕೆಗಳನ್ನು ಕೈಗೊಳ್ಳಲು ಏಕಸ್ವಾಮ್ಯ ಹಕ್ಕುಗಳನ್ನು (Sole rights) ಪಡೆದಿರುವ ಹಾಗೂ DAVP ದರ ಹೊಂದಿರುವ ಸಂಸ್ಥೆಗಳಿಗೆ ಮಾತ್ರ ಸರ್ಕಾರದ ಯೋಜನೆ ಮತ್ತು ವಿವಿಧ ಕಾರ್ಯಕ್ರಮಗಳನ್ನು ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ) ಮಾದರಿಯಲ್ಲಿ ಜನರಿಗೆ ಮಾಹಿತಿ ನೀಡಲು ಜಾಹೀರಾತು ನೀತಿ ಅನುಷ್ಠಾನ ನಿಯಮಗಳು 2014 ರನ್ವಯ ಕ್ರಮ ವಹಿಸಲಾಗುತ್ತಿದೆ. |

**ಸಂಖ್ಯೆ:ಕೆಸಿಐ/196/ಪಿಐಪಿ/2024**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**

# ಅನುಬಂಧ

| ಕ್ರ.ಸಂ | ಯೋಜನೆ ವಿವರ | ಮೊತ್ತ |
|---|---|---|
| 1. | ಪಂಚ ಗ್ಯಾರಂಟಿ ಯೋಜನೆ ಕುರಿತು ವಿವಿಧ ಮಾಧ್ಯಮಗಳಲ್ಲಿ ಪ್ರಚಾರ | 66,10,96,270/- |
| 2. | ಸರ್ಕಾರವು 100 ದಿನಗಳು ಪೂರೈಸಿದ ಸಂದರ್ಭದಲ್ಲಿ ಸಾಧನೆ ಬಗ್ಗೆ ಪ್ರಚಾರ | 7,28,52,829/- |
| 3. | 2023-24ನೇ ಸಾಲಿನಲ್ಲಿ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಾದ "ಅನ್ನ ಭಾಗ್ಯ, ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ ಮತ್ತು ಯುವನಿಧಿ" ಯೋಜನೆಗಳು ಸೇರಿದಂತೆ ಮಾನ್ಯ ಮುಖ್ಯಮಂತ್ರಿಗಳು ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನೆರವೇರಿಸಿದ ಕಾರ್ಯಕ್ರಮಗಳು, ರಾಷ್ಟ್ರೀಯ ಹಬ್ಬಗಳ ಆಚರಣೆ ಸಂದರ್ಭದಲ್ಲಿ ಪ್ರಕಟಿಸಿದ ಜಾಹೀರಾತುಗಳ ವೆಚ್ಚ (ವಿವರಗಳನ್ನು ಲಗತ್ತಿಸಿದೆ). | 100,30,00,000/- |
| 4. | ಮೈಸೂರು ದಸರಾ ವಸ್ತುಪ್ರದರ್ಶನ ಹಾಗೂ ಸ್ತಬ್ಧಚಿತ್ರ ನಿರ್ಮಾಣ | 45,25,407/- |
| 5. | ಭಾರತ ಸಂವಿಧಾನ ಪೀಠಿಕೆ ಓದುವ ಮೂಲಕ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದಡಿ ಬಸ್ ಶೆಲ್ಟರ್ ಜಾಹೀರಾತು | 25,00,000/- |
| 6. | ನೂತನ ಸರ್ಕಾರ ಅಧಿಕಾರಕ್ಕೆ ಬಂದು 100 ದಿನ ಪೂರೈಸಿದ ಹಿನ್ನೆಲೆ ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ಬಸ್ ಶೆಲ್ಟರ್ ಜಾಹೀರಾತು | 1,50,42,337/- |
| 7. | ನೂತನ ಸರ್ಕಾರ ಅಧಿಕಾರಕ್ಕೆ ಬಂದು 100 ದಿನ ಪೂರೈಸಿದ ಹಿನ್ನೆಲೆ ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ಖಾಸಗಿ ಒಡೆತನದ ಪ್ರಚಾರ ಫಲಕಗಳಲ್ಲಿ ಜಾಹೀರಾತು | 51,19,760/- |
| 8. | ಬೆಂಗಳೂರು ಕೃಷಿ ಮೇಳದಲ್ಲಿ ವಸ್ತುಪ್ರದರ್ಶನ | 21,13,957/- |
| 9. | ಬಾಗಲಕೋಟೆ ತೋಟಗಾರಿಕಾ ಮೇಳ ದಲ್ಲಿ ವಸ್ತುಪ್ರದರ್ಶನ | 17,67,037/- |
| 10. | ಜಾತ್ರೆ/ಉತ್ಸವ ಗಳಲ್ಲಿ ವಸ್ತುಪ್ರದರ್ಶನ | 76,05,129/- |
| 11. | ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಕುರಿತು ವಿವಿಧ ಜಿಲ್ಲೆಗಳಲ್ಲಿ ವಸ್ತುಪ್ರದರ್ಶನ ಆಯೋಜನೆ. | 3,48,40,680/- |
| 12. | ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಕುರಿತು ಬಸ್ ಶೆಲ್ಟರ್‌ಗಳಲ್ಲಿ ಜಾಹೀರಾತು ಪ್ರಚಾರ | 3,89,64,223/- |
| 13. | ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಕುರಿತು ಖಾಸಗಿ ಒಡೆತನದ ಪ್ರಚಾರ ಫಲಕಗಳಲ್ಲಿ ಜಾಹೀರಾತು ಪ್ರಚಾರ | 3,19,93,339/- |
| 14. | ವಿವಿಧೆಡೆಗಳಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಸರ್ಕಾರದ ಸಾಧನೆಗಳ ಬಗ್ಗೆ ವಸ್ತುಪ್ರದರ್ಶನ ಆಯೋಜನೆ. | 7,87,385/- |
| | **ಒಟ್ಟು** | **1,88,22,08,353/-** |